ಹತ್ತಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ

ಹತ್ತಿ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಕರ್ನಾಟಕ ರಾಜ್ಯದ ವೈವಿಧ್ಯಮಯ ಕೃಷಿ ವಲಯಗಳಲ್ಲಿನ ಹವಾಗುಣ, ನೀರಾವರಿ ಹಾಗೂ ಮಳೆಯ ಪ್ರಮಾಣಕ್ಕನುಗುಣವಾಗಿ ತಳಿ ಸುಧಾರಣೆ, ಹೊಸ ಬೇಸಾಯ ಪದ್ಧತಿ, ಕೀಟ ಹಾಗೂ ರೋಗಗಳ ನಿಯಂತ್ರಣ ಈ ವಿಷಯಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಸಂಶೋಧನೆಯ ಫಲವಾಗಿ ಹತ್ತಿಯನ್ನು ಲಾಭದಾಯಕ ಬೆಳೆಯನ್ನಾಗಿ ಬೆಳೆಯಲು ಸಾಧ್ಯವಾಗಿದೆ. 2025–26 ನೇ ಸಾಲಿನ ಐ.ಸಿ.ಎ.ಆರ್‌ನ ವಾರ್ಷಿಕ ವರದಿ ರಾಜ್ಯದಲ್ಲಿ ಈ ಬೆಳೆಯನ್ನು 8.08 ಲಕ್ಷ ಹೆ. ಕ್ಷೇತ್ರದಲ್ಲಿ ಬೆಳೆಯುತ್ತಿದ್ದು, ಒಟ್ಟಾರೆ ಹತ್ತಿ ಉತ್ಪಾದನೆಯು 18.56 ಲಕ್ಷ ಬೇಲ್ಸ್ ಉತ್ಪಾದಕತೆಯು ಪ್ರತಿ ಹೆಕ್ಟೇರಿಗೆ 3.90 ಕ್ವಿಂಟಾಲ್ ಅರಳೆ ಇರುವುದು (2025–26).

ಕೀಟಗಳು ಹಾಗೂ ನಿರ್ವಹಣೆ

ಹತ್ತಿಯಲ್ಲಿ ಮೊದಲ ಹಂತದ ಬೆಳವಣಿಗೆಯಲ್ಲಿ ರಸ ಹೀರುವ ಹಾಗೂ ಎಲೆ ತಿನ್ನುವ ಕೀಟಗಳು ಹೆಚ್ಚಾಗಿ ಕಂಡುಬಂದು ನಂತರದ ಬೆಳವಣಿಗೆಯಲ್ಲಿ ಕಾಯಿಕೊರಕಗಳ ಬಾಧೆ ಕಂಡುಬರುವುದು. ಕಾಂಡ ಕೊರೆಯುವ ಮೂತಿಹುಳು ಬೆಳೆಯ ಎಲ್ಲ ಹಂತಗಳಲ್ಲಿ ಬಾಧಿಸುತ್ತಿದ್ದು, ಇತ್ತೀಚೆಗೆ ಮಿರಿಡ್ ತಿಗಣೆ, ಮೊಗ್ಗಿನ ಮಾರಿ ನೊಣ/ಬೆಂಕಿ ಹುಳ ಹಾಗೂ ಗುಲಾಬಿ ಕಾಯಿ ಕೊರಕಗಳ ಬಾಧೆಯು ಕಂಡುಬರುತ್ತಿದೆ.

ಹತ್ತಿಯಲ್ಲಿ ವಿವಿಧ ಕೀಟಗಳ ಗರಿಷ್ಟ– ಆರ್ಥಿಕ ಮಿತಿ

ಕೀಟಗಳು ಗರಿಷ್ಟ – ಆರ್ಥಿಕ ಮಿತಿ (ETL)

ಜಿಗಿ ಹುಳು: ಪ್ರತಿ ಎಲೆಗೆ ಎರಡು ಮರಿ ಹುಳುಗಳು
ಸಸ್ಯ ಹೇನು: ಪ್ರತಿ ಎಲೆಗೆ ಹತ್ತು ಹೇನುಗಳು
ಥ್ರಿಪ್ಸ್ ನುಸಿ: ಪ್ರತಿ ಎಲೆಗೆ ಹತ್ತು ನುಶಿಗಳು
ಬಿಳಿ ನೊಣ : ಪ್ರತಿ ಎಲೆಗೆ ಐದು ನೊಣಗಳು
ಹಿಲಿಯೋಥಿಸ್: ಪ್ರತಿ ಗಿಡಕ್ಕೆ ಒಂದು ಕೀಡೆ ಅಥವಾ ಒಂದು ಮೊಟ್ಟೆ
ಚುಕ್ಕೆ ಕಾಯಿಕೊರಕ: ಶೇ.5 ರಷ್ಟು ಮೊಗ್ಗು ಅಥವಾ ಕಾಯಿಗಳ ಬಾಧೆ
ಗುಲಾಬಿ ಕಾಯಿಕೊರಕ : ಶೇ. 10 ರಷ್ಟು ಬಾಧಿತ ಕಾಯಿಗಳು
ಮಿರಿಡ್ ತಿಗಣೆ : ಪ್ರತಿ ಗಿಡದ ಮೊಗ್ಗುಗಳಲ್ಲಿ ಐದು ತಿಗಣೆಗಳು
*ಕೀಟಗಳ ಗರಿಷ್ಟ ಆರ್ಥಿಕ ಮಿತಿ ದಾಟಿದಾಗ ಮಾತ್ರ ಶಿಫಾರಸ್ಸು ಮಾಡಿದ ಕೀಟನಾಶಕಗಳನ್ನು ಸಿಂಪರಣೆ ಮಾಡಬೇಕು.

ಕಾಯಿ ಕೊರಕ ಕೀಟಗಳ ನಿರ್ವಹಣಾ ಕ್ರಮಗಳು

* ಕಾಯಿಕೊರಕ ಕೀಟಗಳ ಸಮೀಕ್ಷೆ ಮಾಡಲು 40 ದಿನದ ಬೆಳೆಯಲ್ಲಿ ಪ್ರತಿ ಎಕರೆಗೆ ಎರಡು ಮೋಹಕ ಬಲೆಗಳನ್ನು 50 ಮೀಟರ್ ಅಂತರದಲ್ಲಿ ನೆಡಬೇಕು. ಅವಶ್ಯಕ್ಕನುಸಾರವಾಗಿ ಲಿಂಗಾರ್ಷಕ ವಸ್ತುವನ್ನು (ಲೂರ್) ಬದಲಾಯಿಸಬೇಕು.
* 25 ದಿವಸದ ಚೆಂಡು ಹೂವಿನ ಸಸಿಗಳನ್ನು ಅಥವಾ ಬೇಗ ಮಾಗುವ ತೊಗರಿ ತಳಿಯನ್ನು (ಐಸಿಪಿಎಲ್–87) ಹೊಲದ ಸುತ್ತಲೂ ನೆಡಬೇಕು/ಬಿತ್ತಬೇಕು.
* ಕಾಯಿಕೊರಕದ ತತ್ತಿ ಸಂಖ್ಯೆ ಆಧರಿಸಿ ತತ್ತಿ ನಾಶಕಗಳಾದ 2.0 ಮಿ. ಲೀ. ಪ್ರೋಫೆನೊಫಾಸ್ 50 ಇ. ಸಿ. ಅಥವಾ 1.0 ಗ್ರಾಂ ಥೈಯೋಡಿಕಾರ್ಬ್ 75 ಡಬ್ಲ್ಯೂಪಿ. ಯನ್ನು ಪ್ರತಿ ಲೀ. ನೀರಿನಲ್ಲಿ ಕರಗಿಸಿ ಸಿಂಪರಿಸಬೇಕು.
* ಬೆಳೆಯ 80–90 ಕಾಲಾವಧಿಯಲ್ಲಿ ಕುಡಿ ಚಿವುಟಿ ತೆಗೆಯುವುದರಿಂದ ಕಾಯಿಕೊರಕಗಳ ಪತಂಗಗಳು ಮೊಟ್ಟೆ ಇಡುವುದನ್ನು ಕಡಿಮೆಗೊಳಿಸಿ ಕೀಟದ ಹಾವಳಿಯನ್ನು ನಿಯಂತ್ರಿಸಬಹುದು.

ಸಸ್ಯ ಸಂರಕ್ಷಣಾ ಕ್ರಮಗಳು

ಪ್ರಮುಖ ರಸ ಹೀರುವ ಕೀಟಗಳು ಹಾಗೂ ನಿರ್ವಹಣೆ

ಜಿಗಿ ಹುಳು

ಇದರ ಬಾಧೆ ಬಿತ್ತಿದ 15–20 ದಿನಗಳಲ್ಲಿ ಕಂಡುಬರುವುದು. ಎಲೆಗಳ ಕೆಳಗೆ ಅಡ್ಡಡ್ಡವಾಗಿ ಹರಿದಾಡುವ ಪ್ರೌಢ ಮತ್ತು ಮರಿ ಹುಳುಗಳು ರಸಹೀರುವುದರಿಂದ ಮೊದಲು ಹಳದಿ ಬಣ್ಣಕ್ಕೆ ತಿರುಗಿ ನಂತರ ಕೆಂಪಾಗುತ್ತವೆ ಬಾಧೆ ಹೆಚ್ಚಾದಲ್ಲಿ ಎಲೆಗಳು ಒಣಗುತ್ತವೆ.

ಥ್ರಿಪ್ಸ್ ನುಸಿ

ಚಿಕ್ಕ ಗಾತ್ರದ ಪ್ರೌಢ ಮತ್ತು ಮರಿ ಥ್ರಿಪ್ಸ್ ನುಸಿಗಳು ಎಲೆಯ ಕೆಳಗಡೆಯಿಂದ ರಸ ಹೀರುವುದರಿಂದ ಎಲೆಗಳು ಮೊದಲು ಬಿಳಿ ವರ್ಣಕ್ಕೆ ತಿರುಗುತ್ತವೆ.

ನಿರ್ವಹಣಾ ಕ್ರಮಗಳು

ಬೀಜೋಪಚಾರ: ಪ್ರತಿ ಕಿ. ಗ್ರಾಂ ಬೀಜವನ್ನು 10 ಗ್ರಾಂ ಇಮಿಡಾಕ್ಲೋಪ್ರಿಡ್ 70 ಡಬ್ಲ್ಯೂ.ಎಸ್. ಅಥವಾ 5 ಗ್ರಾಂ ಥಯಾಮಿಥಾಕ್ಸಾಮ್ 70 ಡಬ್ಲ್ಯೂ.ಎಸ್‌ದಿಂದ ಬೀಜೋಪಚಾರ ಮಾಡುವುದರಿಂದ ಮೊದಲ ಹಂತದಲ್ಲಿ ಬರುವ ರಸ ಹೀರುವ ಕೀಟಗಳನ್ನು 35–40 ದಿನಗಳವರೆಗೆ ನಿಯಂತ್ರಿಸಬಹುದು.

ಕೀಟನಾಶಕ ಸಿಂಪರಣೆ

ಅವಶ್ಯವಿದ್ದಲ್ಲಿ ರಸ ಹೀರುವ ಕೀಟಗಳ ಗರಿಷ್ಟ ಆರ್ಥಿಕ ಸಂಖ್ಯೆಯನ್ನು (ಇಟಿಎಲ್) ಆಧರಿಸಿ ಶೇ. 5 ರ ಬೇವಿನ ಬೀಜದ ಕಷಾಯ ಅಥವಾ ಬೇವಿನ ಕೀಟನಾಶಕ ಅಥವಾ ಅಂತರವ್ಯಾಪಿ ಕೀಟನಾಶಕಗಳಾದ 0.3 ಗ್ರಾಂ. ಫ್ಲೋನಿಕ್‌ಅಮಿಡ್ 50 ಡಬ್ಲ್ಯೂಡಿಜಿ ಅಥವಾ 0.3 ಗ್ರಾಂ. ಡೈನೊಟೆಫ್ಯುರಾನ್ 20% ಎಸ್. ಜಿ. ಅಥವಾ 2.0 ಮಿ. ಲೀ. ಡೈಮಿಥೋಯೇಟ್ 30 ಇ. ಸಿ. ಒಂದು ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಇತರೆ ರಸ ಹೀರುವ ಕೀಟಗಳು ಹಾಗೂ ನಿರ್ವಹಣೆ

ಬಿಳಿ ನೊಣ :

ಬೆಳೆಯ 50 ದಿನಗಳಿಂದ ಪ್ರಾರಂಭವಾಗುತ್ತದೆ. ಪ್ರೌಢ ಕೀಟಗಳು ಎಲೆಯ ಕೆಳಭಾಗದಲ್ಲಿ ಮರಿ ಕೀಟಗಳು ಮಧ್ಯಭಾಗದಿಂದ ರಸ ಹೀರುವುದರಿಂದ ಎಲೆಗಳು ಹಳದಿಯಾಗುತ್ತವೆ ಕೀಟಗಳು ಸಿಹಿ ಪದಾರ್ಥವನ್ನು ಎಲೆಗಳ ಮೇಲೆ ಸ್ರವಿಸುವುದರಿಂದ ಕಪ್ಪು ಬೂಷ್ಟ್ ಬೆಳೆದು ಎಲೆಗಳಲ್ಲಿ ಆಹಾರ ಉತ್ಪಾದನೆ ಕಡಿಮೆ ಆಗುತ್ತದೆ. ಇದರಿಂದ ಮೊಗ್ಗು ಮತ್ತು ಸಣ್ಣ ಕಾಯಿಗಳು ಉದುರುತ್ತವೆ.

ನಿರ್ವಹಣೆ ಕ್ರಮಗಳು

ಪ್ರತಿ ಎಕರೆಗೆ 20 ರಂತೆ ಹಳದಿ ಬಣ್ಣದ ಅಂಟಿನ ಬಲೆಗಳನ್ನು ಬೆಳೆಯ ಎತ್ತರಕ್ಕೆ ನೆಡಬೇಕು. ಶೇ. 5 ರ ಬೇವಿನ ಬೀಜದ ಕಷಾಯ ಅಥವಾ ಬೇವಿನ ಕೀಟನಾಶಕ ಅಥವಾ 1.5 ಮಿ. ಲೀ. ಟ್ರೈಜೋಫಾಸ್ 40 ಇ. ಸಿ. ಕೀಟನಾಶಕಗಳನ್ನು ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಮೈಟ್ ನುಶಿ

ಮೈಟ್ ನುಶಿಗಳು ಸಾಮಾನ್ಯವಾಗಿ ಬೆಳೆಯ ಕೊನೆಹಂತದಲ್ಲಿ ಬರುತ್ತವೆ. ಇವು ಕೆಂಪಾಗಿದ್ದು ಎಲೆಗಳ ಕೆಳಗಡೆ ಉಜ್ಜಿ ರಸ ಹೀರುವುವು.

ನಿರ್ವಹಣೆ ಕ್ರಮಗಳು

ಪ್ರತಿ ಲೀ. ನೀರಿಗೆ 2.50 ಗ್ರಾಂ. ಡೈಕೋಫಾಲ್ 18.5 ಇ.ಸಿ. ಬೆರೆಸಿ ಸಿಂಪಡಿಸಬೇಕು.

ಮಿರಿಡ್ ತಿಗಣೆ

ಪ್ರೌಢ ಮತ್ತು ಮರಿ ತಿಗಣೆಗಳು ಮೊಗ್ಗು, ಮತ್ತು ಚಿಕ್ಕ ಗಾತ್ರದ ಕಾಯಿಗಳಿಂದ ರಸ ಹೀರುತ್ತವೆ. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಮೊಗ್ಗು ಹಾಗೂ ಸಣ್ಣ ಕಾಯಿಗಳು ಉದುರುತ್ತವೆ. ಬಾಧಿತ ಕಾಯಿಗಳ ಮೇಲೆ ಕಪ್ಪು ಕಲೆಗಳು ಕಂಡು ಬಂದು, ಗಿಣಿ ಮೂಗಿನ ಆಕಾರ ಹೊಂದುತ್ತವೆ. ಬಾಧಿತ ಕಾಯಿಗಳು ಇರುಕಾಗಿ ಒಡೆಯುತ್ತವೆ. ಬೆಳೆಯ 55–120 ದಿನಗಳವರೆಗೂ ಈ ಕೀಟದ ಬಾಧೆ ಕಂಡುಬರುತ್ತದೆ.

ನಿರ್ವಹಣೆ ಕ್ರಮಗಳು

2.0 ಮಿ. ಲೀ. ಪ್ರೊಫೆನೊಫಾಸ್ 50 ಇ. ಸಿ. ಅಥವಾ 1.0 ಗ್ರಾಂ. ಅಸಿಫೇಟ್ 75 ಎಸ್.ಪಿ. ಅಥವಾ 1.0 ಮಿ. ಲೀ. ಫಿಪ್ರೋನಿಲ್ 5 ಎಸ್. ಸಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಗುಲಾಬಿ ಕಾಯಿ ಕೊರಕ

ಗುಲಾಬಿ ವರ್ಣದ ಮರಿಹುಳು, ಮೊಗ್ಗು, ಹೂ ಮತ್ತು ಬೆಳೆಯುವ ಹಂತದ ಕಾಯಿಗಳನ್ನು ಬಾಧಿಸುತ್ತವೆ. ಬಾಧಿತ ಹೂಗಳು ಬುಗರಿಯ ಆಕಾರಕ್ಕೆ ತಿರುಗುತ್ತವೆ. ಈ ಕೀಟವು ಎಳೆಯ ಕಾಯಿಗಳಲ್ಲಿ ಸೇರಿಕೊಂಡು ಬೀಜಗಳನ್ನು ತಿನ್ನುತ್ತವೆ. ಕಾಯಿ ಒಡೆದ ನಂತರ ಮಾತ್ರ ಬಾಧೆಗೊಳಗಾದ ಕಾಯಿಗಳು ಇರುಕಲಾಗಿ ಒಡೆಯುತ್ತವೆ.

ಗುಲಾಬಿ ಕಾಯಿಕೊರಕದ ನಿರ್ವಹಣೆಗಾಗಿ ವಿಶೇಷ ಕ್ರಮಗಳು

ಈ ಕೀಟದ ಸಮೀಕ್ಷೆಗಾಗಿ ಪ್ರತಿ ಎಕರೆಗೆ 2 ರಂತೆ ಲಿಂಗಾಕರ್ಷಕ ಬಲೆಗಳನ್ನು ನೆಡಬೇಕು. ಈ ಕೀಟದ ಗಂಡು ಪತಂಗಗಳನ್ನು ಸಾಮೂಹಿಕವಾಗಿ ಆಕರ್ಷಿಸಿ ನಾಶಪಡಿಸಲು ಪ್ರತಿ ಎಕರೆಗೆ 12 ರಂತೆ ಮೋಹಕ ಬಲೆಗಳನ್ನು ಸಮಾನಾಂತರವಾಗಿ ಅಳವಡಿಸಬೇಕು. ಬಲೆಗೆ ಬಿದ್ದ ಪತಂಗಗಳನ್ನು ಸಾಯಿಸಲು ಕೀಟನಾಶಕದಲ್ಲಿ ಅದ್ದಿದ ಅರಳೆಯನ್ನು ಬಲೆಯಲ್ಲಿ ಇಡಬೇಕು.

ಆರ್ಥಿಕ ಹಾನಿಯ ಮಟ್ಟ ತಿಳಿಯುವಿಕೆ

* ಮೂರು ದಿನ ಸತತವಾಗಿ ಪ್ರತಿ ದಿನ 8 ಪತಂಗಗಳು ಮೋಹಕ ಬಲೆಗಳಲ್ಲಿ ಬಿದ್ದಿರುವುದು.
* 60 ಹೂವುಗಳಲ್ಲಿ 6 ಹೂವುಗಳು ಹಾನಿಯಾಗಿರುವುದು ಅಥವಾ 20 ಕಾಯಿಗಳಲ್ಲಿ 2 ಕಾಯಿ ಹಾನಿಯಾಗಿರುವುದು ಅಥವಾ 2 ಕ್ಕಿಂತ ಹೆಚ್ಚು ಮರಿಗಳು ಕಂಡುಬಂದಿರುವುದು (ಶೇ. 10 ರಷ್ಟು ಬಾಧೆ).
* 100 ದಿನಗಳ ಅವಧಿಗಿಂತ ಮುಂಚಿನ ಬೆಳೆಯಲ್ಲಿ 2 ಮಿ. ಲೀ. ಪ್ರೊಫೆನೋಫಾಸ್ 50 ಇ.ಸಿ. ಅಥವಾ 1.0 ಗ್ರಾಂ ಥಯೋಡಿಕಾರ್ಬ್ 75 ಡಬ್ಲ್ಯೂಪಿ ಅಥವಾ 1.0 ಮಿ.ಲೀ. ಸ್ಪೈನೆಟೋರಾಮ್ 12 ಎಸ್.ಸಿ ಅಥವಾ 2.0 ಮಿ. ಲೀ. ಕ್ವಿನಾಲ್‌ಫಾಸ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
* 100 ದಿನಗಳ ನಂತರದ ಬೆಳೆಯಲ್ಲಿ ಅವಶ್ಯಕತೆಗನುಸಾರವಾಗಿ 0.5 ಮಿ. ಲೀ. ಲ್ಯಾಮ್ಡಾಸೈಹ್ಯಾಲೋಥ್ರಿನ್ ಅಥವಾ 0.5 ಮಿ. ಲೀ. ಡೆಕಾಮೈಥ್ರಿನ್ 2.8 ಇ.ಸಿ. ಅಥವಾ 0.5 ಮಿ. ಲೀ. ಸೈಫರ್‌ಮೈಥ್ರಿನ್ 10 ಇ. ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಪ್ರತಿ ಎಕರೆಗೆ 400–500 ಲೀಟರ್ ಸಿಂಪರಣಾ ದ್ರಾವಣ ಬಳಸಬೇಕು.

ಹತ್ತಿ ಬೆಳೆಯ ರೋಗಗಳು:

ಕರಿ ಹಿಪ್ಪೆ ರೋಗ

ಕೋನಾಕಾರದ ಹಸಿ ಚುಕ್ಕೆಗಳು ಎಲೆಗಳ ಮೇಲೆ ಕಾಣಿಸಿಕೊಂಡು, ನಂತರ ನರಗಳ ಮೇಲೂ ಪಸರಿಸುತ್ತವೆ. ದೇಟುಗಳ ಮೇಲೆಯೂ ರೋಗದ ಲಕ್ಷಣಗಳು ಕಂಡುಬರುತ್ತವೆ.

ನಿರ್ವಹಣಾ ಕ್ರಮಗಳು

0.5 ಗ್ರಾಂ ಸ್ಟ್ರೆಪ್ಟೋಸೈಕ್ಲಿನ್ ಮತ್ತು 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯೂಪಿ. ಮಿಶ್ರಣವನ್ನು ಪ್ರತಿ ಲೀ. ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು.

ತುಕ್ಕು ರೋಗ

ಎಲೆ ಕೆಳಭಾಗದಲ್ಲಿ ಕಂದು ಬಣ್ಣದ ಬೊಕ್ಕೆಗಳ ರೂಪದಲ್ಲಿ ಲಕ್ಷಣಗಳು ಆರಂಭವಾಗಿ ಎಲೆಗಳ ಬಹುಭಾಗ ಆಕ್ರಮಿಸಿಕೊಳ್ಳುವವು. ಸೋಂಕು ಉಂಟಾದ ಎಲೆಗಳು ಉದುರುತ್ತವೆ.

ನಿರ್ವಹಣಾ ಕ್ರಮಗಳು

ಮೊದಲನೆ ಸಿಂಪರಣೆಯಾಗಿ 2 ಗ್ರಾಂ ಕ್ಲೋರೊಥಲೋನಿಲ್ 75 ಡಬ್ಲ್ಯೂ. ಪಿ. ಇದಾದ 15 ದಿನಗಳ ನಂತರ ಎರಡನೆಯ ಸಿಂಪರಣೆಯಾಗಿ 5 ಗ್ರಾಂ ಸೋಡೋಮೋನಾಸ್ ಫ್ಲೋರೆಸೆನ್ಸ್ ಜೈವಿಕ ರೋಗನಾಶಕ ಹಾಗೂ ಮೂರನೆ ಸಿಂಪರಣೆಯಾಗಿ ಪುನಃ 2 ಗ್ರಾಂ ಕ್ಲೋರೊಥಲೋನಿಲ್ 75 ಡಬ್ಲ್ಯೂ. ಪಿ. ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು.

ಸಿಡಿ ರೋಗ : ರೋಗದ ಲಕ್ಷಣ: ಗಿಡಗಳು ಬಾಡಿ ಒಣಗುವವು

ನಿರ್ವಹಣಾ ಕ್ರಮಗಳು

ಕಾಯಿ ಕೊರಕದ ಹತೋಟಿಗೆ ಸಿಂಪಡಿಸುವ ಕೀಟನಾಶಕಗಳ ಜೊತೆ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯೂ.ಪಿ. ಮತ್ತು 0.5 ಗ್ರಾಂ ಸ್ಟ್ರೆಪ್ಟೋಮೈಸಿನ್ ಸಲ್ಫೇಟ್ ಅಥವಾ 2 ಗ್ರಾಂ ಮ್ಯಾಂಕೋಜೆಬ್ 75 ಡಡಬ್ಲ್ಯೂ.ಪಿ. ಅಥವಾ 2 ಗ್ರಾಂ ಕ್ಲೊರೋಥ್ಯಾಲೊನಿಲ್ 75 ಡಬ್ಲ್ಯೂ.ಪಿ. ಪ್ರತಿ ಲೀ. ನೀರಿಗೆ ಸೇರಿಸಿ ಸಿಂಪಡಿಸಬೇಕು.

ಕಾಯಿ ಕೊಳೆ ರೋಗ

ರೋಗದ ಲಕ್ಷಣ

ಕಾಯಿಗಳು ಕೊಳೆತು, ಬೂಸ್ಟ್ ಬೆಳೆದು ಕೆಲವೊಮ್ಮೆ ನೊರೆ ಕಾಣಿಸಿಕೊಳ್ಳುವುದು.

ನಿರ್ವಹಣಾ ಕ್ರಮಗಳು

2 ಗ್ರಾಂ. ಕಾರ್ಬೆಂಡೈಜಿಮ್ 50 ಡಬ್ಲ್ಯೂಪಿ ಶಿಲೀಂಧ್ರನಾಶಕವನ್ನು ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ತಯಾರಿಸಿದ ದ್ರಾವಣವನ್ನು ರೋಗ ಪೀಡಿತ ಗಿಡಗಳ ಸುತ್ತಲೂ ಮಣ್ಣಿನಲ್ಲಿ ಮತ್ತು ಸುತ್ತಲಿನ ಗಿಡಗಳ ಮಣ್ಣಿನಲ್ಲಿ ಸೇರಿಸಬೇಕು.

ಲೇಖಕರು : ಡಾ.ಶ್ರೀವಾಣಿ ಜಿ ಎನ್
ಡಾ.ತಿಮ್ಮಣ್ಣ
ಇಂ.ವೀಣಾ ಟಿ
ಡಾ.ಮಲ್ಲಾರೆಡ್ಡಿ
ಡಾ. ಅಫ್ಸಾನಾ ಬಾನು
ಡಾ. ಉಮೇಶ್ ಬಾಬು
ಡಾ.ವೀಣಾ ಕಂಬಳಿ

ಪ್ರಕಾಶಕರು : ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ,
ರಾಯಚೂರು

ಗೌರವ ಸಲಹೆಗಾರರು: ಡಾ. ಎ.ಆರ್. ಕುರುಬರ
ವಿಸ್ತರಣಾ ನಿರ್ದೇಶಕರು
ಕೃ.ವಿ.ವಿ,ರಾಯಚೂರು

UASR/PC/LL-29/2025-26

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ,
ರಾಯಚೂರು

ಹತ್ತಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ







2025-26

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ,
ರಾಯಚೂರು

ಶುಲ್ಕ ರಹಿತ ರೈತರ ಸಹಾಯವಾಣಿ ಸಂಖ್ಯೆ:
1800–425–0470